# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 785/2024

**ಸಾಕ್ಷಿಯನ್ನು ದಿಃ 17.03.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | |
|---|---|---|
| ಹೆಸರು | ಜಹೀರ್ ಪಾಷ | ಸಿ.ಡಬ್ಲ್ಯೂಃ 1 ಪಿ.ಡಬ್ಲ್ಯೂಃ 1 |
| ತಂದೆಯ ಹೆಸರು | ಲೇಟ್ ಅನ್ವರ್ ಪಾಷ | |
| ವಯಸ್ಸು | 38ವರ್ಷ | |
| ಕೆಲಸ | ವ್ಯಾಪಾರ | |
| ವಾಸಸ್ಥಳ | ಮೈಸೂರು | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

1. ಚಾಸಾ-2 ನನ್ನ ಭಾವ, ಚಾಸಾ-3ರಿಂದ 6ರವರ ಪರಿಚಯ ಇಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇದೆ. ಈಗ ನೊಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ದಾಖಲೆ ದೂರಾಗಿದ್ದು ಅದನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1(ಎ)ಎಂದು ಗುರುತಿಸಲಾಯಿತು. ಠಾಣೆಯಲ್ಲಿ ಪೋಲೀಸರ ಸಮಕ್ಷಮ ಹೇಳಿಕೆ ನೀಡಿರುತ್ತೇನೆ.

2. ದಿಃ 12.05.2024ರಂದು ನನ್ನ ಭಾವನಾದ ಚಾಸಾ-2ರವರ ಮನೆಗೆ ಬಂದಿರುತ್ತೇನೆ. ಚಾಸಾ-2ರವರು ಈ ದಿನ ನೀನು ಮನೆಗೆ ಹೋಗಬೇಡ, ಮಾರನೇ ದಿನ ಹೋಗು ಎಂದು ತಿಳಿಸಿದರು. ದಿಃ 13.05.2024ರಂದು ಬೆಳಿಗ್ಗೆ 9.00ಗಂಟೆ ಸಮಯದಲ್ಲಿ ಚಾಸಾ-2ರವರ ಜೊತೆ ಚಾಸಾ-2ರವರಿಗೆ ಸೇರಿದ ದ್ವಿಚಕ್ರ ವಾಹನದಲ್ಲಿ ಮೀನು ತರಲು ಹೋಗಿದ್ದೇವು. ನಂತರ ನಾವು ಮೀನು ಮಾರಾಟ ಮಾಡುವವರ ಬಳಿ ಹೋಗಿ ಮೀನು ಇವತ್ತಿನದಾ ಎಂದು ಕೇಳಿದಾಗ ಅವರು ಮೀನು 4 ದಿನದ್ದು ಎಂದು ಹೇಳಿ ಬೇಕಾದರೆ ತಗೋ ಇಲ್ಲದಿದ್ದರೆ ಹೋಗು ಎಂದು ಉಡಾಫೆಯಿಂದ ಮಾತನಾಡಿದರು. ಅದನ್ನು ಕೇಳಿದ ಚಾಸಾ-2ರವರು ಇದು ವ್ಯಾಪಾರ ಮಾಡುವ ರೀತಿಯಲ್ಲ, ಏಕೆ ಈ ರೀತಿ ಮಾತನಾಡುತ್ತೀಯಾ, ಸ್ವಲ್ಪ ಸಮಾಧಾನದಿಂದ ಮಾತನಾಡು ಎಂದು ಹೇಳಿದಾಗ ನಾನು ಹೀಗೆ ಮಾತನಾಡುವುದು ಎಂದು ಅವಾಚ್ಯ ಶಬ್ದಗಳಿಂದ ಬೈದು, ಅವರ ಕೈಯಲ್ಲಿದ್ದ ಚಾಕುವನ್ನು ತೋರಿಸಿ, ಅವರು ತಕ್ಕಡಿಯಿಂದ ತೆಗೆದುಕೊಂಡು ಬಂದ 1kg ತೂಕದ ಭಟ್ಟಿನಲ್ಲಿ ನನ್ನ ಎಡತೋಳಿಗೆ ಗುದ್ದಿ ನೋವುಂಟುಮಾಡಿದರು, ಆಗ ಚಾಸಾ-2ರವರು ಬಂದು ಜಗಳವನ್ನು ಬಿಡಿಸಿ, ನಾವು ಬಂದ ವಾಹನದಲ್ಲಿ ಹುಣುಸೂರು ಕಡೆ ಹೋಗುತ್ತಿರುವಾಗ ಮತ್ತೆ ನಮ್ಮನ್ನು ಅಡ್ಡಗಟ್ಟಿ ಮತ್ತೆ ನಮಗೆ ದೊಣ್ಣೆಯಿಂದ ನನಗೆ ಹಾಗೂ ಚಾಸಾ-2ರವರಿಗೆ ಹಲ್ಲೆ ಮಾಡಿ 2ನೇ ಆರೋಪಿ ಚಾಸಾ-

2ರವರಿಗೆ ಕೈಕಾಲು, ಮುಖಕ್ಕೆ ಹೊಡೆದು ನೋವುಂಟುಮಾಡಿದರು. 6ನೇ ಆರೋಪಿ ದೊಣ್ಣೆಯಿಂದ ಚಾಸಾ–2ರವರಿಗೆ ಎದೆ, ಕಾಲು , ಕೈ ಗೆ ಹೊಡೆದರು. ನಂತರ ಅಲ್ಲೆ ಇದ್ದ ಚಾಸಾ–3, 4ರವರು ಬಂದು ಗಲಾಟೆ ಬಿಡಿಸಿದರು ನಿಮ್ಮನ್ನು ಬಿಡುವುದಿಲ್ಲ, ನಿಮ್ಮನ್ನು ಮತ್ತೆ ನೋಡಿಕೊಳ್ಳುತ್ತೇವೆ ಎಂದು ಹೇಳಿ ಹೊರಟುಹೋದರು. ನಂತರ ನಾನು ಹಾಗೂ ಚಾಸಾ–2ರವರು ಹುಣಸೂರು ಸರಕಾರಿ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ನಂತರ ಈ ಮೇಲಿನಂತೆ ನಿಪಿ.1ರ ದೂರು ನೀಡಿರುತ್ತೇನೆ.

3. ನಂತರ ಮಾರನೆ ದಿನ ಠಾಣೆಗೆ ಹೋಗಿ ನಮಗೆ ಗಲಾಟೆ ಮಾಡುವ ಸಮಯದಲ್ಲಿ ನಮಗೆ ಅವಾಚ್ಯ ಶಬ್ದಗಳಿಂದ ಬೈಯುವಾಗ ಇಬ್ಬರು ಹೆಂಗಸರು ಇವರನ್ನು ಬಿಡಬೇಡಿ, ಸಾಯಿಸಿಬಿಡಿ ಎಂದು ಹೇಳಿದ್ದು, ನಿಪಿ.1ರ ದೂರು ಕೊಡುವ ಸಮಯದಲ್ಲಿ ಬಿಟ್ಟುಹೋಗಿದ್ದು ಅವರ ಹೆಸರು ಶಿರಿನ್ ತಾಜ್ ಹಾಗೂ ನಗ್ಮ ಆಗಿತ್ತು ಎಂದು ಮುಂದುವರಿದ ಹೇಳಿಕೆಯನ್ನು ಠಾಣೆಯಲ್ಲಿ ನೀಡಿರುತ್ತೇನೆ. ಸಾಕ್ಷಿ ಒಂದು ದೊಣ್ಣೆ ಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ–1 ಎಂದು ಹಾಗೂ 1 ಕೆ.ಜಿ ತೂಕದ ಬಟ್ಟನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ–2 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಎನ್. ಕೆ ಅವರಿಂದ–**

4. ಆ ದಿನ ನಾವು ಮೀನು ತರಲು ಶಬ್ಬೀರ್ ನಗರದಿಂದ 9.00 ಗಂಟೆಗೆ 10 ನಿಮಿಷ ಕಡಿಮೆ ಇರುವಾಗ ಹೊರಟಿದ್ದೇವು. ಅಜಾದ್ ನಗರ ತಲುಪಿದಾಗ 9.00ಗಂಟೆ ಆಗಿತ್ತು. ನಾವು ಮನೆಯಿಂದ ಹೊರಟ ಜಾಗದಿಂದ ಕೃತ್ಯ ನಡೆಯಿತು ಎನ್ನಲಾದ ಜಾಗವು ಅಂದಾಜು ಸುಮಾರು 6–7 ಕಿ.ಮೀ. ಇರಬಹುದು, ನಿಖರವಾಗಿ ಗೊತ್ತಿಲ್ಲ.

5. ನಾವು ಆ ಜಾಗಕ್ಕೆ ಹೋಗುವ ಸಮಯದಲ್ಲಿ ಇತರೆ ಗ್ರಾಹಕರು ಇರಲಿಲ್ಲ, ಆಗಷ್ಟೆ ಮೀನು ಬಾಕ್ಸ್ ಗಳನ್ನು ತಂದು ಇಡುತ್ತಿದ್ದರು. ಆ ಜಾಗದಲ್ಲಿ ಎಷ್ಟು ಮೀನು ಅಂಗಡಿಗಳಿವೆ ಎಂದು ನನಗೆ ಗೊತ್ತಿಲ್ಲ. ಸದರಿ ಮೀನಿನ ಅಂಗಡಿ ಪಕ್ಕ ಮನೆಗಳಿದ್ದವು. ನಾವು ಕಾಟ್ಲ ಮೀನನ್ನು ತೆಗೆದುಕೊಳ್ಳಲು ಹೋಗಿದ್ದೇವು. ನಾನು ಮೀನು ತೆಗೆದುಕೊಳ್ಳಲು ಹೋಗಿದ್ದ ಅಂಗಡಿ ಪಕ್ಕ ಇನ್ನೊಂದು ಮೀನಿನ ಅಂಗಡಿ ಇತ್ತು ಎಂದರೆ ನಾನು ಗಮನಿಸಲಿಲ್ಲ. ಸದರಿ ಅಂಗಡಿ ಅಜಾದ್ ನಗರಕ್ಕೆ ಹೋಗುವ ರಸ್ತೆಯ ಎಡಭಾಗದಲ್ಲಿ ಇತ್ತು. ಸದರಿ ಮೀನಿನ ಅಂಗಡಿಯ ಮೇಲ್ಚಾವಣಿ

ತೆಂಗಿನ ಗರಿಗಳಿಂದ ಮಾಡಿದ್ದರು, ಬಿದಿರಿನ ಕೋಲುಗಳ ಸಹಾಯದಿಂದ ಸದರಿ ಅಂಗಡಿಯ ಛಾವಣಿ ನಿರ್ಮಿಸಿದ್ದರು. ಸದರಿ ಮೀನಿನ ಅಂಗಡಿ ಅದರ ಪಕ್ಕದಲ್ಲಿ ಇವೆ ಎಂದು ಹೇಳಿದ ಮನೆಗಳಿಂದ ಸುಮಾರು 10–15 ಅಡಿ ಅಂತರದಲ್ಲಿತ್ತು.

6. ಆರೋಪಿ ಏರುಧ್ವನಿಯಲ್ಲಿ ಬೇಕಾದರೆ ತೆಗೆದುಕೊಳ್ಳಿ ಎಂದು ಉಡಾಫೆಯಿಂದ ಹೇಳಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ನನಗೆ ಚಾಕುವಿನಿಂದ ಹಲ್ಲೆ ಮಾಡಲು ಬಂದಿದ್ದರು ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಘಟನೆ ನಡೆಯಿತು ಎನ್ನುವಾಗ ಚಾಸಾ2 ನನ್ನ ಭಾವ ನನ್ನ ಜೊತೆಯಲ್ಲಿಯೇ ಇದ್ದರು. ಸದರಿ ಮೀನಿನ ಅಂಗಡಿಯಲ್ಲಿ ಡಿಜಿಟಲ್ ತೂಕದ ಯಂತ್ರ ಇತ್ತು ಎಂದರೆ ಸರಿಯಲ್ಲ. ಅಲ್ಲಿ ತೂಕದ ಸುಮಾರು ಬಟ್ಟುಗಳು ಇದ್ದವು.

**7.** ರಾತ್ರಿ ಸುಮಾರು **10.30**ಕ್ಕೆ ದೂರು ನೀಡಿರುತ್ತೇನೆ. ದೂರನ್ನು ಠಾಣೆಯ ಹೊರಗೆ ತಯಾರಿಸಿ ತಂದಿದ್ದರು, ನನಗೆ ಕನ್ನಡ ಬರೆಯಲು ಬರುತ್ತಿರಲಿಲ್ಲ. ನನ್ನ ಭಾವ ಚಾಸಾ–2ರವರು ಹೆಚ್ ಡಿ ಕೋಟೆಯ **CCB** ಬ್ರಾಂಚ್ ನಲ್ಲಿ ಕೆಲಸ ಮಾಡುತ್ತಾರೆ, ಅವರು ಕೊಟ್ಟ ಸಲಹೆ ಮೇರೆಗೆ ನಾನು ನಿಪಿ.1ರ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**8.** ಆ ದಿನ ನಾವು ಆರೋಪಿಗಳ ಜೊತೆ ಅಸಭ್ಯವಾಗಿ ನಡೆದು ಕೊಂಡಿದ್ದು ಅದರಿಂದ ಪಾರಾಗಲು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮರುಹೇಳಿಕೆಯಲ್ಲಿ ಹೇಳಿರುವ ಹೆಂಗಸರ ವಿರುದ್ಧ ಅಸಭ್ಯವಾಗಿ ನಡೆದು ಕೊಂಡಿದ್ದು ಅದರಿಂದ ಪಾರಾಗಲು ಸುಳ್ಳು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಮು.ಮ.–1 ಹಾಗೂ 2 ಅನ್ನು ನಾನು ಸೃಷ್ಟಿ ಮಾಡಿ ತಂದು ಠಾಣೆಗೆ ಹಾಜರುಪಡಿಸಿದ್ದೇನೆ ಹೊರತು ಸದರಿ ಮಾಲುಗಳು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

9. ನನ್ನ ದೂರಿನಲ್ಲಿ ಹೇಳಿರುವ ವಿವರಗಳಿಗೂ ಹಾಗೂ ಮು.ಮಾ–1ಕ್ಕೂ ವ್ಯತ್ಯಾಸವಿದೆ ಎಂದರೆ ಅಂದಾಜಿನ ಮೇಲೆ ಹೇಳಿರುತ್ತೇನೆ. ಆರೋಪಿಗಳು ತನ್ನ ಅಂಗಡಿಯಲ್ಲಿ ಡಿಜಿಟಲ್ ತೂಕದ ಯಂತ್ರವನ್ನು ಹೊಂದಿದ್ದರು ಸಹ ಅವರು ತೂಕ ಮಾಡುವ ಬಟ್ಟುಗಳನ್ನು ಇಟ್ಟುಕೊಂಡಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿದ್ದ ಹೆಂಗಸರುಗಳು ನನ್ನ ವಿರುದ್ಧ ದೂರು ನೀಡುತ್ತಾರೆ ಎಂದು ತಪ್ಪಿಸಿಕೊಳ್ಳುವ ಉದ್ದೇಶದಿಂದ ಆರೋಪಿಗಳ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆ ಕಾರಣದಿಂದಲೇ ಸದರಿ ವಿಚಾರವನ್ನು ದೂರಿನಲ್ಲಿ ತಿಳಿಸದೆ ಸೃಷ್ಟಿ ಮಾಡಿ, ಮರುಹೇಳಿಕೆಯಲ್ಲಿ ತಿಳಿಸಿದ್ದೇನೆ ಎಂದರೆ

ಸರಿಯಲ್ಲ. ಘಟನೆಗೂ ಆರೋಪಿಗಳಿಗೂ ಯಾವುದೇ ಸಂಬಂಧವಿಲ್ಲದಿದ್ದರೂ ಕೂಡ ಅವರನ್ನು ವಿನಃ ಕಾರಣ ಈ ಪ್ರಕರಣದಲ್ಲಿ ಸೇರ್ಪಡೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಮು.ಮಾ–1 ಹಾಗೂ 2ರಿಂದ ನನ್ನ ಮೇಲೆ ಹಲ್ಲೆ ಆಗಿ ನನಗೆ ಗಾಯಗಳಾಗಿತ್ತು ಎಂದು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

10. ನಾನು ಆ ದಿನ ಅಸ್ಪತ್ರೆಯಲ್ಲಿ ಸಂಜೆ 6–7ಗಂಟೆ ವರಗೂ ಇದ್ದೆ. ಆ ದಿನ ನಾನು ಅಸ್ಪತ್ರೆಯಿಂದ 6–7ಗಂಟೆಗೆ ಬಿಡುಗಡೆಗೊಂಡಿದ್ದೆ, ಆದರೆ ವಿಧ್ಯುತ್ ಸರಬರಾಜು ಇಲ್ಲದಿದ್ದ ಕಾರಣ ವರದಿಯನ್ನು ತಡವಾಗಿ ನೀಡಿದ್ದರು.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಇದೆ.

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ. ಎಂ. ಎಫ್. ಸಿ. , ಹುಣಸೂರು.